## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2178**
**ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್**
**ಉತ್ತರಿಸುವ ದಿನಾಂಕ : 26.03.2026**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕಿನ ಕರೂರು ಏತ ನೀರಾವರಿ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು; ಪ್ರಸ್ತುತ ಯಾವ ಹಂತದಲ್ಲಿದೆ: ಈ ಕಾಮಗಾರಿಯ ಪೂರ್ಣ ವಿವರಗಳನ್ನು ಒದಗಿಸುವುದು; | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನ ಕರೂರು ಗ್ರಾಮದ ದೊಡ್ಡ ಹಳ್ಳದ ಹತ್ತಿರ 10.50 ಕ್ಯೂಸೆಕ್ಸ್ ನೀರನ್ನೆತ್ತಿ ಕೂರಿಗನೂರು ಕಾಲುವೆಗೆ ನೀರನ್ನು ಹರಿಸಿ ಕರೂರು, ಮಾಡಿಸೂಗೂರು ಮತ್ತು ಕೂರಿಗನೂರು ಗ್ರಾಮಗಳ ಸುಮಾರು 635 ಎಕರೆ ಪ್ರದೇಶಕ್ಕೆ, ನೀರಾವರಿ ಸೌಲಭ್ಯ ಕಲ್ಪಿಸುವ ಕರೂರು ಏತ ನೀರಾವರಿ ಯೋಜನೆಯನ್ನು ದಿನಾಂಕ:07.02.2000ರಲ್ಲಿ ಪ್ರಾರಂಭಿಸಲಾಗಿದ್ದು, ಪ್ರಸ್ತುತ, ಕಾಮಗಾರಿಯು ಪೂರ್ಣಗೊಂಡಿದೆ. |
| ಆ) | ಈ ಕಾಮಗಾರಿಗೆ ಈ ಹಿಂದೆ ಬಳಸಿದ್ದ ರೈಸಿಂಗ್ ಮೈನ್ ಪೈಪ್‌ಗಳು ಕೊಚ್ಚಿ ಹೋಗಿರುವುದರಿಂದ ಮತ್ತು ಹೊಸದಾಗಿ ಎಂ.ಎಸ್. ಪೈಪ್ ಗಳನ್ನು ಅಳವಡಿಸಬೇಕಾಗಿರುವುದು ನಿಜವೇ: ಹಾಗಿದ್ದಲ್ಲಿ, ಇದಕ್ಕೆ ಸರ್ಕಾರದ ತೀರ್ಮಾನಗಳೇನು: (ವಿವರ ಒದಗಿಸುವುದು) | ಸದರಿ ಯೋಜನೆಯಲ್ಲಿ ಕರೂರು ಮತ್ತು ಮಾಟಸೂಗೂರು ರಸ್ತೆಯ ಹತ್ತಿರ ಇರುವ ಹಳ್ಳದ ಭಾಗದಲ್ಲಿ ಸುಮಾರು 30 ಮೀಟರ್ ಉದ್ದದ Raising main ಪೈಪುಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದು, ಇದನ್ನು ಸರಿಪಡಿಸಲಾಗಿರುತ್ತದೆ.<br>ಮುಂದುವರೆದು, ಈ ಯೋಜನೆಯಲ್ಲಿ Raising mainನ NP2 ಪೈಪುಗಳನ್ನು ಸುಮಾರು 25 ವರ್ಷಗಳ ಹಿಂದೆ ಅಳವಡಿಸಲಾಗಿದ್ದು, Trial run ಮಾಡಲಾಗಿ, Raising main ಪೈಪುಗಳಲ್ಲಿ ಸೋರಿಕೆ ಕಂಡು ಬಂದಿರುತ್ತದೆ. ಪ್ರಸ್ತುತ, NP2 ಪೈಪುಗಳ ಬದಲಾಗಿ Mild Steel ಪೈಪುಗಳನ್ನು ಅಳವಡಿಸುವ ಬಗ್ಗೆ ನಿಗಮದಲ್ಲಿ ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ. |
| ಇ) | ಈ ಯೋಜನೆಯ ಇನ್ಟೇಕ್ ವೆಲ್‌ನ ಹತ್ತಿರ ಕಾಮಗಾರಿ ನಡೆಸಬೇಕಾಗಿರುವುದು ನಿಜವೇ, ಹಾಗಿದ್ದಲ್ಲಿ, waste weir wallನ ಕಾಮಗಾರಿಗೆ ಅನುದಾನ ನೀಡಲು ಸರ್ಕಾರದ ತೀರ್ಮಾನಗಳೇನು: ಯಾವ ಕಾಲಮಿತಿಯಲ್ಲಿ ನೀಡಲಾಗುವುದು: | |
| ಈ) | ಈ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಕಾರ್ಯಗತಗೊಳಿಸಿ ಸಿರುಗುಪ್ಪ ತಾಲ್ಲೂಕಿನ ಈ ಭಾಗದ ರೈತರಿಗೆ ನೀರನ್ನು ನೀಡಲಾಗುವುದು? (ಮಾಹಿತಿ ನೀಡುವುದು) | ಈ ಯೋಜನೆಯು weir ನಿರ್ಮಾಣದ ಕಾಮಗಾರಿಯನ್ನು ಒಳಗೊಂಡಿರುವುದಿಲ್ಲ. ಈ ಯೋಜನೆಯ Intake wellನ ಹತ್ತಿರ weir ಅನ್ನು ನಿರ್ಮಿಸುವ ವಿಷಯವಾಗಿ ಅವಶ್ಯಕತೆ ಮತ್ತು ತಾಂತ್ರಿಕ ಕಾರ್ಯಸಾಧ್ಯತೆಗಳನ್ನು ಪರಿಶೀಲಿಸಿ, ಅನುದಾನದ ಲಭ್ಯತೆ ಅನುಸಾರ ಕ್ರಮ ವಹಿಸಲಾಗುವುದು. |

**ಜಸಂಇ 68 ಎಂಎಲ್‌ಎ 2026**

**(ಡಿ.ಕೆ. ಶಿವಕುಮಾರ್)**
**ಉಪಮುಖ್ಯಮಂತ್ರಿ**